ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	116 (150)
ಸದಸ್ಯರ ಹೆಸರು	:	ಶ್ರೀ ಎನ್.ಎಸ್. ಭೋಸರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	03.03.2020
ಉತ್ತರಿಸಬೇಕಾದ ಸಚಿವರು	:	ನಗರಾಭಿವೃದ್ಧಿ ಸಚಿವರು.

****

ಕ್ರ.ಸಂ	ಪ್ರಶ್ನೆ	ಉತ್ತರ
ಅ)	KUWS ವತಿಯಿಂದ ರಾಯಚೂರು ನಗರದಲ್ಲಿ ಕುಡಿಯುವ ನೀರಿಗಾಗಿ ಹಮ್ಮಿಕೊಂಡಿರುವ ಯೋಜನೆಗಳು ಯಾವುವು;	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (KUWS & DB) ವತಿಯಿಂದ ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿಯಲ್ಲಿ ರಾಯಚೂರು ನಗರದಲ್ಲಿ ಕುಡಿಯುವ ನೀರು ಸರಬರಾಜಿಗಾಗಿ ಅಂದಾಜು ವೆಚ್ಚ ರೂ. 57.00 ಕೋಟಿ ಮೊತ್ತದಲ್ಲಿ 2015-16ನೇ ಸಾಲಿನಲ್ಲಿ Improvement in water supply scheme ಅಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. 1. 2.5, 5.0, 10.0 ಮತ್ತು 15.0 ಲಕ್ಷ ಸಾಮರ್ಥ್ಯದ 14 ಸಂಖ್ಯೆ ಜಲಸಂಗ್ರಹಗಾರ ನಿರ್ಮಿಸುವುದು. 2. 31.13 ಕಿ.ಮೀ. ಎಂ.ಎಸ್/ಡಿಐ/ಕೊಳವೆ ಮಾರ್ಗ ಅಳವಡಿಸುವುದು. 3. ಐ.ಪಿ.ಎಸ್. ಮತ್ತು ರಾಂಪುರ್ ನೀರು ಶುದ್ಧೀಕರಣ ಘಟಕದಲ್ಲಿ ಯಂತ್ರೋಪಕರಣ ಬದಲಾಯಿಸುವುದು. 4. ಹಾಲಿ ನೀರು ಶುದ್ಧೀಕರಣ ಘಟಕದಲ್ಲಿ ಹೆಚ್ಚುವರಿಯಾಗಿ 10 ಎಂ.ಎಲ್.ಡಿ. ಸಾಮರ್ಥ್ಯದ ಫಿಲ್ಟರ್ ಬೆಡ್ ನಿರ್ಮಿಸುವುದು. 5. 22500 ಮನೆಗಳಿಗೆ ನಳ ಸಂಪರ್ಕ ಜೋಡಣೆ
ಆ)	ರಾಯಚೂರು ನಗರದಲ್ಲಿ ಕುಡಿಯುವ ನೀರಿನ ಸರಬರಾಜು 24/7 ಯೋಜನೆ ಕಾಲಮಿತಿಯಲ್ಲಿ ಕಾಮಗಾರಿ ಪೂರೈಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	• ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ವತಿಯಿಂದ ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ 24/7 ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿಯಲ್ಲಿ (ಎನ್‌ಕೆಯುಎಸ್‌ಐಪಿ) ರಾಯಚೂರು 24/7 ಕುಡಿಯುವ ನೀರಿನ ಯೋಜನೆಯ ಕಾಮಗಾರಿಗೆ ದಿನಾಂಕ 28/02/2015 ರಂದು ರೂ.117.96 ಕೋಟಿಗಳ ವೆಚ್ಚದಲ್ಲಿ (ನಿರ್ಮಾಣ ವೆಚ್ಚ ರೂ.79.93 ಕೋಟಿ, ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚ ರೂ.38.02 ಕೋಟಿಗಳು) ಗುತ್ತಿಗೆ ನೀಡಲಾಗಿದೆ. • ಗುತ್ತಿಗೆ ಕರಾರಿನ ಪ್ರಕಾರ ಕಾಮಗಾರಿಯನ್ನು ಪೂರ್ಣಗೊಳಿಸಲು ದಿನಾಂಕ 27/08/2017 ರವರೆಗೆ ಅವಧಿ ನಿಗಧಿಪಡಿಸಲಾಗಿತ್ತು. ಸದರಿ ಕಾಮಗಾರಿಯ ವಿನ್ಯಾಸ ಅಂತಿಮಗೊಳಿಸುವಲ್ಲಿ ಹಾಗೂ ಗುತ್ತಿಗೆದಾರರ ಪ್ರಗತಿಯಲ್ಲಿ ವಿಳಂಬವಾದ ಕಾರಣ ಗುತ್ತಿಗೆ ಅವಧಿಯನ್ನು ದಿನಾಂಕ: 30/08/2020 ರವರೆಗೆ ವಿಸ್ತರಿಸಲು ಪರಿಶೀಲಿಸಲಾಗುತ್ತಿದೆ.

		• ಕಾಮಗಾರಿಯ ವಿವರ ಕೆಳಗಿನಂತಿದೆ: <table><tr><th>ಕಾಮಗಾರಿಯ ವಿವರ</th><th>ಗುರಿ</th><th>ಸಾಧನೆ</th></tr><tr><td>ವಿತರಣಾ ಜಾಲದ ಉದ್ದ (ಹೆಚ್‌ಡಿಪಿಇ) (ಕಿ.ಮೀ)</td><td>525.76</td><td>456</td></tr><tr><td>ರೈಸಿಂಗ್ ಮ್ಯೆನ್ (ಕಿ.ಮೀ)</td><td>15.03</td><td>15.01</td></tr><tr><td>ಮನೆ ಸಂಪರ್ಕ (ಸಂಖ್ಯೆ)</td><td>37117</td><td>32035</td></tr></table> • ಕೃಷ್ಣ ನದಿ ಹತ್ತಿರ ಜಾಕ್‌ವೆಲ್‌ನಲ್ಲಿ ಎರಡು ಹೊಸ ಪಂಪ್ ಅಳವಡಿಸಿದ್ದು, ಪಂಪುಗಳು ಚಾಲನೆಯಲ್ಲಿದೆ. ಈ ಯೋಜನೆಯ ಕಾಮಗಾರಿ ಪೂರ್ಣಗೊಳಸಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ: • ಬಾಕಿ ಕಾಮಗಾರಿಯನ್ನು ವಿಸ್ತರಣಾ ಅವಧಿಯಲ್ಲಿ ಪೂರ್ಣಗೊಳಸಲು ನಿಯಮಿತವಾಗಿ ಪ್ರಗತಿ ಪರಿಶೀಲನೆ ನಡೆಸಲಾಗುತ್ತಿದೆ. ಕಾಮಗಾರಿಗಳ ಪ್ರಗತಿಯ ವಿವರವನ್ನು ದಿನವಾಹಿ ಪಡೆದು ಯೋಜನೆಯ ಪ್ರಗತಿಯಲ್ಲಿ ಕುಂಠಿತವಾದ ಪಕ್ಷದಲ್ಲಿ ಗುತ್ತಿಗೆದಾರರೊಂದಿಗೆ ಸಭೆ ನಡೆಸಿ ಪ್ರಗತಿ ಸಾಧಿಸಲು ಆಗಿಂದಾಗ್ಯೆ ಕ್ರಮ ಕೈಗೊಳ್ಳಲಾಗುತ್ತಿದೆ. • ವೀಡಿಯೋ ಕಾನ್ಫರೆನ್ಸ್ / ಸ್ಥಳ ಪರಿಶೀಲನೆ ಮೂಲಕ ಆಗಿಂದಾಗ್ಯೆ ಪ್ರಗತಿಯ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. • ಗುತ್ತಿಗೆದಾರರು ಈ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಸಲು ಅವಶ್ಯವಾದ ಸಂಪನ್ಮೂಲಗಳನ್ನು ಸಜ್ಜುಗೊಳಸುವಲ್ಲಿ ಅಗತ್ಯ ಸೂಚನೆ ನೀಡಲಾಗುತ್ತಿದೆ. • ವಿಳಂಬ ಮಾಡಿರುವ ಈ ಗುತ್ತಿಗೆದಾರರಿಗೆ ಕರಾರಿನ್ವಯ, ಸೂಕ್ತ ದಂಡ ವಿಧಿಸಲಾಗುತ್ತಿದೆ. • ಕಾಮಗಾರಿ ವೇಗವಾಗಿ ಪೂರ್ಣಗೊಳಸಲು ಗುತ್ತಿಗೆದಾರರಿಗೆ ಎಚ್ಚರಿಕೆ ನೋಟಿಸ್ ಸಹ ಜಾರಿಗೊಳಸಲಾಗಿದೆ. • ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ರಾಯಚೂರು ಟಾಸ್ಕ್ ಫೋರ್ಸ್ ಸಭೆಯಲ್ಲಿ ಸಾಕಷ್ಟು ಬಾರಿ ಎಚ್ಚರಿಕೆ ನೀಡಲಾಗಿದೆ. • ರಾಯಚೂರು ನಗರ ನೀರು ಸರಬರಾಜು ಯೋಜನೆಯನ್ನು ಆಗಸ್ಟ್ 2020 ಕ್ಕೆ ಪೂರ್ಣಗೊಳಸಲು ಎಲ್ಲಾ ಕ್ರಮವನ್ನು ಜರುಗಿಸಲಾಗಿದೆ. • ಈವರೆಗೂ ಆರ್ಥಿಕವಾಗಿ ಶೇ.68% ವೆಚ್ಚವಾಗಿರುತ್ತದೆ ಹಾಗೂ ಭೌತಿಕವಾಗಿ ಶೇ.89% ಪ್ರಗತಿ ಆಗಿರುತ್ತದೆ.
ಇ)	ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ರಾಯಚೂರು ಹೊರಭಾಗದಲ್ಲಿ ರಿಂಗ್ ರಸ್ತೆ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ದಿನಾಂಕ: 23.10.2017 ರಂದು ನಡೆದ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ರಾಯಚೂರು ಹೊರಭಾಗದಲ್ಲಿ ಹೊರವರ್ತುಲ ರಸ್ತೆ ಅಭಿವೃದ್ಧಿ ಪಡಿಸಲು ಟೋಟಲ್ ಸ್ಟೇಷನ್ ಸರ್ವೆ ಕೈಗೊಂಡು ರಸ್ತೆಯ ಎಲ್ಲೆಯನ್ನು ಗುರುತಿಸಿಕೊಂಡು ಗುರುತು ಕಲ್ಲುಗಳನ್ನು ಅಳವಡಿಸಿ ಇದಕ್ಕೆ ತಗಲುವ ವೆಚ್ಚವನ್ನು ಪ್ರಾಧಿಕಾರದಿಂದ ಭರಿಸಲು ಸೂಕ್ತ ಪ್ರಸ್ತಾವನೆಯನ್ನು ಸಿದ್ಧಪಡಿಸಲು ನಿರ್ಣಯಿಸಲಾಗಿರುತ್ತದೆ.

		ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಜಮೀನುದಾರರಿಗೆ ಭೂ ಪರಿಹಾರ ನೀಡಲು ಹಣ ಲಭ್ಯವಿಲ್ಲದಿರುವುದರಿಂದ ಹೊರವರ್ತುಲ (RING ROAD) ರಸ್ತೆಗೆ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಳ್ಳಲಾಗಿರುವುದಿಲ್ಲ.
ಈ)	ರಾಯಚೂರು ನಗರದಲ್ಲಿ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ಸ್ವಂತ ಕಟ್ಟಡ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ ಕೋರಿ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

ಸಂಖ್ಯೆ: ನಅಇ 13 ಯುಎಂಎಸ್ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು